# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

*ವಿಶೇಷ ಆಯುಕ್ತರು (ಯೋಜನೆ) ರವರ ಕಛೇರಿ, ಎನ್.ಆರ್. ವೃತ್ತ, ಬೆಂಗಳೂರು – 560 002.*

ಸಂಖ್ಯೆ: ವಿ.ಆ(ಯೋ)/ಪಿಆರ್/8151 /2012-13 **ದಿನಾಂಕ: 02-02-2013**

## ಕಛೇರಿ ಆದೇಶ

ವಿಷಯ: ವಸತಿ (ಮುಖ್ಯ) ಭೂ ಉಪಯೋಗ ಹೊಂದಿರುವ ನಿವೇಶನಗಳಲ್ಲಿ ವಸತಿ ಉಪಯೋಗ ಹೊರತುಪಡಿಸಿ ಇತರೇ ಉಪಯೋಗಗಳಿಗೆ ದಿನಾಂಕ: 25-01-2012 ರ ನಂತರ ನೀಡಿರುವ ನಕ್ಷೆ ಮಂಜೂರಾತಿಯನ್ನು ಹಿಂಪಡೆಯುವ ಬಗ್ಗೆ.

ಉಲ್ಲೇಖ: 1) ರಿಟ್ ಅರ್ಜಿ ಸಂಖ್ಯೆ: 3676/2008 ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 25-01-2012 ರಂದು ನೀಡಿರುವ ಮಧ್ಯಂತರ ಆದೇಶ

2) ಕಛೇರಿ ಆದೇಶ ಸಂಖ್ಯೆ: ವಿಆ(ಯೋ)/ಪಿಆರ್/8151/12-13, ದಿನಾಂಕ: 08-11-2012

3) ರಿಟ್ ಅರ್ಜಿ ಸಂಖ್ಯೆ: 3676/2008 ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 13-12-2012 ರಂದು ನೀಡಿರುವ ದಿನದ ಆದೇಶ

* * * * * *

ವಿಷಯಕ್ಕೆ ಸಂಬಂಧಿಸಿದಂತೆ ಪರಿಷ್ಕೃತ ಮಾಸ್ಟರ್ ಪ್ಲಾನ್ – 2015 ರಲ್ಲಿ ವಸತಿ (ಮುಖ್ಯ) ಎಂದು ವರ್ಗೀಕರಿಸಿರುವ ಪ್ರದೇಶದಲ್ಲಿ ವಸತಿ ಉಪಯೋಗವನ್ನು ಹೊರತುಪಡಿಸಿ ಬೇರಾವುದೇ ಉಪಯೋಗಗಳಿಗೆ ಅನುಮತಿ ನೀಡಬಾರದೆಂದು ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 25-01-2012 ರಂದು ಮಧ್ಯಂತರ ಆದೇಶವನ್ನು ಹೊರಡಿಸಿದ್ದು, ಸದರಿ ದಾವೆಯ ಪ್ರಕ್ರಿಯೆಯು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಇನ್ನೂ ಪ್ರಗತಿಯಲ್ಲಿದ್ದು ಇತ್ಯರ್ಥವಾಗಿರುವುದಿಲ್ಲ. ಹಾಗಾಗಿ, ದಿನಾಂಕ: 25-01-2012 ರ ನಂತರ ವಸತಿ (ಮುಖ್ಯ) ಭೂ ಉಪಯೋಗ ಹೊಂದಿರುವ ನಿವೇಶನಗಳಲ್ಲಿ ವಸತಿ ಉಪಯೋಗ ಹೊರತುಪಡಿಸಿ ಇತರೇ ಉಪಯೋಗಗಳಿಗೆ ನೀಡಿರುವ ನಕ್ಷೆ ಮಂಜೂರಾತಿಗಳನ್ನು ಹಿಂಪಡೆದು ಸದರಿ ಮಾಹಿತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿತ್ತು. ಸದರಿ ದಾವೆಯ ವಿಚಾರಣೆಯನ್ನು ದಿನಾಂಕ: 13-12-2012 ರಂದು ನಡೆಸಿ, ದಿನಾಂಕ: 25-01-2012 ರ ಮಧ್ಯಂತರ ಆದೇಶಕ್ಕೆ ಮುಂದುವರೆದು ಸ್ಪಷ್ಟೀಕರಣವನ್ನು ನೀಡಿದ್ದು, ಈ ಕೆಳಕಂಡಂತೆ ಇರುತ್ತದೆ.

We direct that the BBMP shall not permit or grant any change of land user in the following areas i.e., Malleshwaram, Richmond Town, Vasanthanagar, Jayanagar, Vijayanagar, Vishweshwarapura, Rajajinagar and R.T.Nagar. In addition thereto, the residential areas mentioned and shown in CDP 1995, regardless of whether they are subsequently depicted as residential main or residential mized are also included. This order shall also apply to other residential areas regardless of the nomenclature used in the Revised Master Plan of 2015. Any building plans that have been sanctioned or trade licenses or change of land user that has been allowed subsequent to our order dated: 25-01-2012 shall be recalled.

PR|3036|12-13
13|2|13

C1
Circular file

ಆದ್ದರಿಂದ, ರಿಟ್ ಅರ್ಜಿ ಸಂಖ್ಯೆ: 3676/2008, ದಿನಾಂಕ: 13-12-2012 ರಂದು ದಿನದ ಆದೇಶದಲ್ಲಿ ನೀಡಿರುವ ಮುಂದುವರೆದ ಸ್ಪಷ್ಟೀಕರಣದಂತೆ ದಿನಾಂಕ: 25-01-2012 ರ ಮಧ್ಯಂತರ ಆದೇಶದ ನಂತರ ವಸತಿ (ಮುಖ್ಯ) ಮತ್ತು ವಸತಿ (ಮಿಶ್ರ) ಉಪಯೋಗಗಳಿಗೆ ಹೊಂದಿಕೊಂಡಿರುವ ನಿವೇಶನಗಳಲ್ಲಿ ವಸತಿ ಉಪಯೋಗ ಹೊರತುಪಡಿಸಿ ಇತರೇ ಉಪಯೋಗಗಳಿಗೆ ಕೇಂದ್ರ ಕಛೇರಿ ನಗರ ಯೋಜನೆ ಶಾಖೆ ಹಾಗೂ ಆಯಾ ವಲಯ ಕಛೇರಿಗಳಲ್ಲಿ ನೀಡಿರುವ ನಕ್ಷೆ ಮಂಜೂರಾತಿಗಳನ್ನು ಕೂಡಲೇ ಹಿಂಪಡೆದು, ಹಿಂಪಡೆದಿರುವ ಆದೇಶದೊಂದಿಗೆ ವಿವರವಾದ ವರದಿಯನ್ನು ಕೂಡಲೇ ಅಪರ ನಿರ್ದೇಶಕರು (ನಗರ ಯೋಜನೆ) ರವರ ಕಛೇರಿಗೆ ಕಳುಹಿಸಲು ಹಾಗೂ ವಸತಿ (ಮುಖ್ಯ) ಮತ್ತು ವಸತಿ (ಮಿಶ್ರ) ಭೂ ಉಪಯೋಗದ ವ್ಯಾಪ್ತಿಯ ನಿವೇಶನಗಳಲ್ಲಿ ಇನ್ನು ಮುಂದೆ ವಸತಿ ಉದ್ದೇಶದ ಕಟ್ಟಡಗಳಿಗೆ ಮಾತ್ರ ನಕ್ಷೆ ಮಂಜೂರಾತಿ ನೀಡತಕ್ಕದೆಂದು ಈ ಮೂಲಕ ಸೂಚಿಸಿದೆ.

**ಇದನ್ನು ಅತೀ ಜರೂರೆಂದು ಪರಿಗಣಿಸುವುದು.**

11/2/13

**ವಿಶೇಷ ಆಯುಕ್ತರು (ಯೋಜನೆ)**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ಪ್ರತಿಯನ್ನು:**

1. ಮಾನ್ಯ ಆಯುಕ್ತರವರ ಅವಗಾಹನಗೆ ತರಲು ಮಾನ್ಯ ಆಯುಕ್ತರವರ ಆಪ್ತಶಾಖೆಗೆ ಕಳುಹಿಸಿದೆ.
2. ಪ್ರಧಾನ ಅಭಿಯಂತರವರ ಮಾಹಿತಿಗಾಗಿ ಕಳುಹಿಸಿದೆ.
3. ಅಪರ ಆಯುಕ್ತರು / ಜಂಟಿ ಆಯುಕ್ತರು (ಪೂರ್ವ / ಪಶ್ಚಿಮ / ದಕ್ಷಿಣ)/ ಬೊಮ್ಮನಹಳ್ಳಿ/ ಬ್ಯಾಟರಾಯನಪುರ/ ದಾಸರಹಳ್ಳಿ / ಮಹದೇವಪುರ / ರಾಜರಾಜೇಶ್ವರಿನಗರ) ರವರಿಗೆ ಮಾಹಿತಿಗಾಗಿ ಕಳುಹಿಸುತ್ತಾ, ಕ್ರಮ ವಹಿಸಲು ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡಲು ಸೂಚಿಸಿದೆ.
4. ಅಪರ ನಿರ್ದೇಶಕರು (ನಗರ ಯೋಜನೆ) ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
5. ಜಂಟಿ ನಿರ್ದೇಶಕರು (ನಗರ ಯೋಜನೆ – ಉತ್ತರ ಮತ್ತು ದಕ್ಷಿಣ) ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ .
6. ಸಹಾಯಕ ನಿರ್ದೇಶಕರುಗಳು (ನಗರ ಯೋಜನೆ) (ಪೂರ್ವ / ಪಶ್ಚಿಮ / ದಕ್ಷಿಣ / ಬೊಮ್ಮನಹಳ್ಳಿ / ಬ್ಯಾಟರಾಯನಪುರ / ದಾಸರಹಳ್ಳಿ / ಮಹದೇವಪುರ / ರಾಜರಾಜೇಶ್ವರಿನಗರ) ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ

Certified Copy
K. Madhu Kumar

**ಪ್ರಧಾನ ಅಭಿಯಂತರರ ತಾಂತ್ರಿಕ ಸಹಾಯಕರು**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**